2018 ಕ.ತೀ.ವ 391

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎ.ಎನ್. ವೇಣುಗೋಪಾಲ ಗೌಡ

ಶ್ರೀ ಆರ್. ನಾರಾಯಣಸ್ವಾಮಿ –ವಿರುದ್ಧ– ಶ್ರೀ ಎ.ವಿ. ನಾರಾಯಣ ಸ್ವಾಮಿ*

ನಿರ್ದಿಷ್ಟ ಪರಿಹಾರ ಅಧಿನಿಯಮ, 1963ರ 2ನೇ ಪ್ರಕರಣದ (2)ನೇ ಉಪಪ್ರಕರಣ.

ಸಿವಿಲ್ ಪ್ರಕ್ರಿಯಾ ಸಂಹಿತೆಯ 100ನೇ ಪ್ರಕರಣದಡಿಯಲ್ಲಿನ ನಿಯತ ಎರಡನೇ ಅಪೀಲು.

ವಾದಿಯು ದಾವಾ ಸ್ವತ್ತಿನ ಕರಾರಿನ ನಿರ್ದಿಷ್ಟ ಪಾಲನೆಯ ಡಿಕ್ರಿಗಾಗಿ ಸಲ್ಲಿಸಿದ ಅರ್ಜಿಯನ್ನು ವಿಚಾರಣಾ ನ್ಯಾಯಾಲಯ ಪುರಸ್ಕರಿಸಿ ಆದೇಶಿಸುತ್ತದೆ. ಪ್ರತಿವಾದಿ ಸಲ್ಲಿಸಿದ ಅಪೀಲನ್ನು ಮೊದಲ ಅಪೀಲು ನ್ಯಾಯಾಲಯವು ಸಹಾ ವಿಚಾರಣಾ ನ್ಯಾಯಾಲಯದ ಆದೇಶವನ್ನು ಸ್ಥಿರೀಕರಿಸುತ್ತದೆ. ಹಾಗಾಗಿ ಪ್ರತಿವಾದಿಯು ಈ ನ್ಯಾಯಾಲಯದಲ್ಲಿ ನಿಯತ ಎರಡನೇ ಅಪೀಲನ್ನು ಸಲ್ಲಿಸಿದ್ದಾನೆ.

20ನೇ ಪ್ರಕರಣ ನಿರ್ದಿಷ್ಟ ಪಾಲನೆ ಡಿಕ್ರಿಗೆ ಅಧಿಕಾರ ವ್ಯಾಪ್ತಿಯು ವಿವೇಚನಾತ್ಮಕವಾದುದೆಂದು ಉಪಬಂಧಿಸಿದೆ ಮತ್ತು ನ್ಯಾಯಾಲಯದಲ್ಲಿ ಕಾನೂನು ಸಮ್ಮತವಾಗಿ ಅಂಥ ಪರಿಹಾರವನ್ನು ಮಂಜೂರು ಮಾಡಬಹುದೆಂಬ ಕಾರಣ ಮಾತ್ರದಿಂದಲೇ ಹಾಗೆ ಮಾಡಲು ಬದ್ಧವಾಗಿರುವುದಿಲ್ಲ ಎಂದು ಉಪಬಂಧಿಸಿದೆ. ಅಧಿನಿಯಮದ 20 ನೇ ಪ್ರಕರಣದ (2) ನೇ ಉಪಪ್ರಕರಣವು ನ್ಯಾಯಲಯವು ಆ ಯಾವುದೇ ಮೂರು ಸನ್ನಿವೇಶಗಳಲ್ಲಿ ನಿರ್ದಿಷ್ಟ ಪಾಲನೆಗಾಗಿ ಡಿಕ್ರಿಯನ್ನು ಕೊಡುವ ತನ್ನ ವಿವೇಚನಾಧಿಕಾರವನ್ನು ಚಲಾಯಿಸಲು ಸಾಧ್ಯವಾಗುವುದಿಲ್ಲ ಎಂದು ಉಪಬಂಧಿಸಿದೆ. ನ್ಯಾಯಾಲಯದ ವಿವೇಚನಾಧಿಕಾರವು ನಿರಂಕುಶವಾಗಿರದೆ ನ್ಯಾಯ

*ನಿಯತ ಎರಡನೇ ಅಪೀಲು ಸಂ. 1886/2014, ದಿನಾಂಕ: 24ನೇ ಮಾರ್ಚ್, 2016.

ಸಮ್ಮತವೂ ಸಕಾರಣವೂ ಆಗಿದ್ದು ನ್ಯಾಯಿಕ ತತ್ವಗಳಿಂದ ಮಾರ್ಗದರ್ಶಕವಾಗಿರತಕ್ಕದ್ದು ಮತ್ತು ಸೂಕ್ತವಾಗಿ ಸಾಧ್ಯವಾಗಿರತಕ್ಕದ್ದು.

ಪ್ರಸ್ತುತ ಮೊಕದ್ದಮೆಯಲ್ಲಿ, ಕೆಳ ನ್ಯಾಯಾಲಯಗಳೆರಡು ಅಧಿನಿಯಮದ 20ನೇ ಪ್ರಕರಣವನ್ನು ಉಲ್ಲೇಖಿಸಿರುವುದರ ಮೂಲಕ ನಿರ್ದಿಷ್ಟ ಪಾಲನೆ ಡಿಕ್ರಿ ನೀಡಲು ವಿವೇಚನೆ ಚಲಾಯಿಸುವುದಕ್ಕೆ ಅಥವಾ ಚಲಾಯಿಸದಿರುವುದಕ್ಕೆ ಮೊಕದ್ದಮೆಯಾಗಿದೆಯೆ ಎಂಬುದನ್ನು ಸರಿಯಾಗಿ ಪರಿಶೀಲನೆ ಮಾಡಿರುವುದಿಲ್ಲ. ಅಧಿನಿಯಮದ 20ನೇ ಪ್ರಕರಣವನ್ನು ಉಲ್ಲೇಖಿಸಿ ಮುಖ್ಯ ವಿವಾದಾಂಶದಂತೆ ಅದನ್ನು ಎತ್ತಿರುವುದಿಲ್ಲ, ಪರಿಗಣಿಸಿರುವುದಿಲ್ಲ ಹಾಗಿದ್ದೂ ಮೊಕದ್ದಮೆಯನ್ನು ನಿರ್ಣಯಿಸಿದೆ. ಆದುದರಿಂದ ಈ ಅಪೀಲು ಪುರಸ್ಕರಿಸುವುದಕ್ಕೆ ಯೋಗ್ಯವಾಗಿದೆ. ಪ್ರಮುಖ ಕಾನೂನು ಅಂಶಗಳನ್ನು ಸರಿಯಾಗಿ ಪರಿಗಣಿಸದಿರುವುದರಿಂದ ಮೇಲೆ ಹೇಳಲಾದ ಕಾನೂನಿನ ಗಣನೀಯ ಪ್ರಶ್ನೆಗೆ ಸಕಾರಾತ್ಮಕವಾಗಿ ಉತ್ತರಿಸಬೇಕಿದೆ.

ಪರಿಣಾಮವಾಗಿ, ಅಪೀಲನ್ನು ಪುರಸ್ಕರಿಸಲಾಗಿದೆ ಮತ್ತು ಪ್ರಶ್ನಿತ ತೀರ್ಪನ್ನು ಮತ್ತು ಡಿಕ್ರಿಯನ್ನು ವಜಾ ಮಾಡಲಾಗಿದೆ. ಈ ಮೊಕದ್ದಮೆಯನ್ನು ವಿಚಾರಣಾ ನ್ಯಾಯಲಯಕ್ಕಾಗಿ ಹೊಸದಾಗಿ ಮುಖ್ಯ ವಾದವನ್ನು ಸುನಾವಣೆ ಮಾಡಲು ಮತ್ತು ಹೊಸದಾಗಿ ನಿರ್ಣಯ ಮಾಡುವ ಸಲುವಾಗಿ ಮೊಕದ್ದಮೆಯನ್ನು ವಿಚಾರಣಾ ನ್ಯಾಯಾಲಯಕ್ಕೆ ವಾಪಸ್ಸು ಕಳುಹಿಸುವುದು.

ಅಪೀಲನ್ನು ಅಂಗೀಕರಿಸಲಾಗಿದೆ.

*ಉಲ್ಲೇಖಿಸಲಾದ ಮೊಕದ್ದಮೆಗಳು* *ಪ್ಯಾರಾಗಳಲ್ಲಿ*

1. *1987 (ಎಸ್‌ಯುಪಿಪಿ) ಎಸ್‌ಸಿಸಿ 340*
*ಪಾರಾಕುಣ್ಣನ್ ವೀಟಿಲ್ಲ ಜೋಸೆಫ್‌ರ ಮಗ ಮಾಥ್ಯೂ –ವಿರುದ್ಧ– ನೆಡುಂಬಾರಾ ಕುರುವಿಲ್ಲ ಅವರ ಮಗ ಮತ್ತು ಇತರರು* *(ಉಲ್ಲೇ) 11*

*2. (2000) 7 ಎಸ್‌ಸಿಸಿ 548*
*ಗೋಬಿಂದ ರಾಮ್ –ವಿರುದ್ಧ– ಗೈನ್ ಚಾಂದ್ (ಉಲ್ಲೇ) 12*
*3. (2008) 12 ಎಸ್‌ಸಿಸಿ 145*
*ಬಾಲ್‌ಕೃಷ್ಣ ಮತ್ತು ಮತ್ತೊಬ್ಬರು –ವಿರುದ್ಧ– ಭಗವಾನ್ ದಾಸ್ (ಮೃತ) ಅವರ ಕಾನೂನು ಸಮ್ಮತ ಪ್ರತಿನಿಧಿಗಳು ಮತ್ತು ಇತರರು (ಉಲ್ಲೇ) 13*

ಅರ್ಜಿದಾರರ ಪರ: ಶ್ರೀ ಕೆ.ಎಸ್. ನಾರಾಯಣಸ್ವಾಮಿ, ವಕೀಲರು;
ಪ್ರತ್ಯರ್ಜಿದಾರರ ಪರ: ಶ್ರೀ ರಘುನಾಥ್, ವಕೀಲರು.

**ತೀರ್ಪು**

**ನ್ಯಾಯಮೂರ್ತಿ ಶ್ರೀ ಎ.ಎನ್. ವೇಣುಗೋಪಾಲ ಗೌಡ:**

ಪ್ರತಿವಾದಿ ಸಲ್ಲಿಸಿದ ಅಪೀಲು ಇದಾಗಿದೆ. ವಾದಿ–ಪ್ರತ್ಯರ್ಜಿದಾರ ದಾವಾ ಸ್ವತ್ತನ್ನು ಮಾರಾಟ ಮಾಡುವುದಕ್ಕೆ ಮಾಡಿಕೊಂಡ ಕರಾರನ್ನು ನಿರ್ದಿಷ್ಟ ಪಾಲನೆ ಮಾಡುವ ಸಂಬಂಧದಲ್ಲಿನ ದಾವೆಯಾಗಿದೆ. ಪರಿಗಣಿಸಿದ ಮಾರಾಟದ ಬಾಕಿ ಮೊಬಲಗನ್ನು ಸ್ವೀಕರಿಸುವುದಕ್ಕೆ ನೋಟೀಸಿನಲ್ಲಿ ತಗಾದೆ ಮಾಡಿರುವುದು ಮತ್ತು ಶುದ್ಧ ಕ್ರಯ ಪತ್ರವನ್ನು ಬರೆದುಕೊಡಲು ನಿರಾಕರಿಸಿರುವುದರಿಂದ, ದಿನಾಂಕ 31.07.2007 ರ ಮಾರಾಟ ಒಪ್ಪಂದವನ್ನು ನಿರ್ದಿಷ್ಟವಾಗಿ ಪಾಲನೆ ಮಾಡುವ ಸಂಬಂಧದಲ್ಲಿ ಡಿಕ್ರಿಯನ್ನು ಹೊರಡಿಸುವುದಕ್ಕಾಗಿ ಈ ದಾವೆಯನ್ನು ಹೂಡಲಾಗಿದೆ.

2. ಪ್ರತಿವಾದಿಯು ಲಿಖಿತ ಹೇಳಿಕೆಯನ್ನು ದಾಖಲಿಸಿರುವರು ಮತ್ತು ಹಲವಾರು ಪ್ರತಿವಾದಗಳನ್ನು ಎತ್ತಿರುವರು.

3. ವಿಚಾರಣಾ ನ್ಯಾಯಾಲಯ ವಿಚಾರಣೆಗಾಗಿ ಈ ಮುಂದಿನ ವಿಷಯಗಳನ್ನು ಎತ್ತಿಕೊಂಡಿದೆ:

> "1) ಪ್ರತಿವಾದಿಯು, ದಾವಾ ಅನುಸೂಚಿತ ಸ್ವತ್ತಿನ ಸಂಬಂಧದಲ್ಲಿ ಒಟ್ಟು 2,00,000/- ರೂಗಳ ಮೊತ್ತಕ್ಕೆ ವಾದಿಯ ಹೆಸರಿನಲ್ಲಿ ದಿನಾಂಕ 31.07.2007 ರಂದು ನೋಂದಾಯಿತ ಮಾರಾಟ ಒಪ್ಪಂದ ಪತ್ರವನ್ನು ಬರೆದುಕೊಟ್ಟಿದ್ದನು ಮತ್ತು ಆ ಪೈಕಿ 1,50,000/- ರೂ.ಗಳನ್ನು ದಾವಾ ಅನುಸೂಚಿತ ಸ್ವತ್ತಿನ ಮಾರಾಟಕ್ಕೆ ಮಾಡಿಕೊಂಡ ಒಪ್ಪಂದದಲ್ಲಿನ ಮುಂಗಡ ಹಣವನ್ನು ಸ್ವೀಕರಿಸಿರುವುದನ್ನು ವಾದಿಯು ರುಜುವಾತು ಪಡಿಸಿರುವನೇ?
>
> 2) ವಾದಿಯು ತನ್ನ ಭಾಗದ ಕರಾರನ್ನು ನೆರವೇರಿಸುವುದಕ್ಕೆ ಯಾವಾಗಲು ಸಿದ್ಧನೆಂದು ಮತ್ತು ಸಮ್ಮತಿ ಹೊಂದಿದ್ದಾನೆಂದು ಮತ್ತೂ ರುಜುವಾತು ಪಡಿಸಿರುವನೇ?
>
> 3) ಕೋರಿರುವ ಪರಿಹಾರಕ್ಕಾಗಿ ವಾದಿಯು ಹಕ್ಕುಳ್ಳವನಾಗಿರುವನೇ?
>
> 4) ಯಾವ ಆದೇಶ ಅಥವಾ ಡಿಕ್ರಿ?"

3.1. ಪ್ರಾ.ಸಾ.1 ಆಗಿ ಸ್ವತಃ ವಾದಿಯನ್ನು ವಿಚಾರಣೆ ಮಾಡಲಾಗಿದೆ ಮತ್ತು ಇಬ್ಬರು ಸಾಕ್ಷಿದಾರರಂತೆ ಪ್ರಾ.ಸಾ.2 ಮತ್ತು 3 ವಿಚಾರಣೆ ಮಾಡಲಾಗಿದೆ ಮತ್ತು 6 ದಸ್ತಾವೇಜುಗಳನ್ನು ಹಾಜರು ಪಡಿಸಲಾಗಿದೆ, ಅವುಗಳನ್ನು ನಿಶಾನೆ ಪಿ1 ರಿಂದ ಪಿ6 ಎಂದು ಗುರುತು ಮಾಡಲಾಗಿದೆ. ಪ್ರತಿವಾದಿಯನ್ನು ಪ್ರತಿವಾದಿ ಸಾಕ್ಷ್ಯ.1 ಆಗಿ ಸ್ವತಃ ಪ್ರತಿವಾದಿಯನ್ನು ವಿಚಾರಣೆ ಮಾಡಲಾಗಿದೆ ಮತ್ತು 3 ಸಾಕ್ಷಿದಾರರಂತೆ ಪ್ರ.ಸಾ.2 ರಿಂದ 4 ಇವರನ್ನು ವಿಚಾರಣೆ ಮಾಡಲಾಗಿದೆ ಮತ್ತು 5 ದಸ್ತಾವೇಜುಗಳನ್ನು

ಹಾಜರು ಪಡಿಸಲಾಗಿದೆ, ಅವುಗಳನ್ನು ನಿಶಾನೆ ಪ್ರ.1 ರಿಂದ ಪ್ರ.5 ಎಂದು ಗುರುತು ಮಾಡಲಾಗಿದೆ.

3.2. ವಿಚಾರಣಾ ನ್ಯಾಯಾಲಯ ಈ ವಿವಾದದಲ್ಲಿ ವಾದಿಯ ಪರವಾಗಿ ನಿರ್ಣಯಿಸಿದೆ ಮತ್ತು ವೆಚ್ಚದೊಂದಿಗೆ ದಾವೆ ಡಿಕ್ರಿಯನ್ನು ಹೊರಡಿಸಿದೆ ಮತ್ತು ಪ್ರತಿವಾದಿಗೆ ಪರಿಗಣನೆಯ ಬಾಕಿ ಕ್ರಯದ ಮೇಲೆ ದಾವೆಯನ್ನು ದಾಖಲಿಸಿದ ದಿನಾಂಕದಿಂದ ಅದು ಸಂದಾಯ ಮಾಡುವವರೆಗೂ 50,000/– ರೂ. ಗಳ ಜೊತೆಯಲ್ಲಿ ವಾರ್ಷಿಕವಾಗಿ ಶೇಕಡ 8 ರಷ್ಟು ಬಡ್ಡಿಯೊಂದಿಗೆ ಪರಿಗಣಿಸಿದ ಬಾಕಿ ಕ್ರಯದ ಮೊಬಲಗನ್ನು ಸ್ವೀಕರಿಸುವ ಮೂಲಕ ನಿರುಪಾಧಿಕ ಕ್ರಯ ಪತ್ರವನ್ನು ಬರೆದುಕೊಡುವುದಕ್ಕೆ ನಿರ್ದೇಶಿಸಿದೆ.

4. ಪ್ರತಿವಾದಿಯು ಸಿವಿಲ್ ಪ್ರಕ್ರಿಯಾ ಸಂಹಿತೆ, 1908 ರ 96 ನೇ ಪ್ರಕರಣದ ಅಡಿಯಲ್ಲಿ ಅಪೀಲನ್ನು ದಾಖಲಿಸಿರುವನು. ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಚಿಂತಾಮಣಿ ಇವರು ಮಾನ್ಯ ನ್ಯಾಯವಾದಿಗಳ ಅಹವಾಲನ್ನು ಆಲಿಸಿರುವರು; ಪರಿಗಣನೆಗಾಗಿ ಈ ಮುಂದಿನ ಅಂಶಗಳನ್ನು ಎತ್ತಿದ್ದಾರೆ:

> "1) ವಿಚಾರಣಾ ನ್ಯಾಯಾಲಯ ಪ್ರತಿವಾದಿ ಸ್ವತ್ತಿನ ಮಾರಾಟಕ್ಕಾಗಿ ಕ್ರಯ ಒಪ್ಪಂದವನ್ನು ನಿರ್ವಹಿಸುತ್ತಿರುತ್ತಾನೆಯೇ ಮತ್ತು ಸಾಲವನ್ನು ಸಂದಾಯ ಮಾಡುವುದಕ್ಕಾಗಿ ಭದ್ರತೆಗಾಗಿ ನಿರ್ವಹಿಸಿರುವುದಿಲ್ಲವೇ ಎಂಬುದನ್ನು ಸಮರ್ಥಿಸಿದೆಯೇ?
>
> 2) ವಿಚಾರಣಾ ನ್ಯಾಯಾಲಯದ ತೀರ್ಪು ಮತ್ತು ಡಿಕ್ರಿಯಲ್ಲಿ ಹಸ್ತಕ್ಷೇಪದ ಅವಶ್ಯಕತೆಯಿದೆಯೇ?
>
> 3) ಯಾವ ಆದೇಶ?"

4.1. ವಿಚಾರಣಾ ನ್ಯಾಯಾಲಯದ ನಿರ್ಣಯವನ್ನು ಅವರು ಸಮ್ಮತಿಸುವುದರೊಂದಿಗೆ ಆರ್.ಎ.ಸಂ.44/2013 ರಲ್ಲಿ ದಿನಾಂಕ 28.08.2014 ರಂದು ಹೊರಡಿಸಿದ ತೀರ್ಪಿನಲ್ಲಿ ಅಪೀಲನ್ನು ವಜಾ ಮಾಡಲಾಗಿದೆ.

5. ಬಾದಿತನಾದುದರಿಂದ ಪ್ರತಿವಾದಿಯು ಸಿವಿಲ್ ಪ್ರಕ್ರಿಯಾ ಸಂಹಿತೆಯ 100 ನೇ ಪ್ರಕರಣದ ಅಡಿಯಲ್ಲಿ ಈ ಎರಡನೇ ಅಪೀಲನ್ನು ದಾಖಲಿಸಿರುವನು.

6. ಪರಿಗಣಿಸುವ ಸಲುವಾಗಿ ಕಾನೂನಿನಲ್ಲಿ ಉದ್ಭವಿಸುವ ಗಣನೀಯ ಪ್ರಶ್ನೆಯೆಂದರೆ, ನಿರ್ದಿಷ್ಟ ಪರಿಹಾರ ಅಧಿನಿಯಮ, 1963 ರ 20 ನೇ ಪ್ರಕರಣದ ಉಲ್ಲೇಖದೊಂದಿಗೆ ಕೆಳ ನ್ಯಾಯಾಲಯಗಳು ಈ ಮೊಕದ್ದಮೆಯನ್ನು ಪರಿಗಣಿಸದಿರುವುದಕ್ಕಾಗಿ ಪ್ರಶ್ನಿತ ಡಿಕ್ರಿಗಳು ಅಸಮರ್ಥನೀಯವೆ ಎಂಬುದಾಗಿದೆ.

7. ಎರಡು ಪಕ್ಷಕಾರರ ಮಾನ್ಯ ವಕೀಲರ ವಾದವನ್ನು ಆಲಿಸಲಾಗಿದೆ ಮತ್ತು ದಾಖಲೆಯನ್ನು ಪರಿಶೀಲಿಸಲಾಗಿದೆ. ಎರಡು ನ್ಯಾಯಾಲಯಗಳು ನಿರ್ದಿಷ್ಟ ಪರಿಹಾರ ಅಧಿನಿಯಮ, 1963 ರ (ಸಂಕ್ಷಿಪ್ತವಾಗಿ ಅಧಿನಿಯಮ) 20 ನೇ ಪ್ರಕರಣದ ಮೂಲಕ ಕಾನೂನಿನ ಅಡಿಯಲ್ಲಿ ಅಗತ್ಯಪಡಿಸಿದ ವಸ್ತು ವಿಷಯ ದೃಷ್ಟಿಕೋನವನ್ನು ಈ ಮೊಕದ್ದಮೆಗೆ ಸರಿಯಾಗಿ ಅನ್ವಯಿಸಿರುವುದಿಲ್ಲ, ಹಾಗೂ ಇಲ್ಲಿ ಶಾಸನಾತ್ಮಕ ಕರ್ತವ್ಯವನ್ನು ಪರಿತ್ಯಜಿಸಲಾಗಿದೆಯೆಂಬುದು ಅಪೀಲುದಾರರ ಮುಖ್ಯವಾದ ವಾದವಾಗಿದೆ. ಪ್ರತ್ಯರ್ಜಿದಾರರ ಪರವಾಗಿ ಮಾನ್ಯ ನ್ಯಾಯಾವಾದಿಗಳು ಕೆಳ ನ್ಯಾಯಾಲಯವು ಹೊರಡಿಸಿದ ಡಿಕ್ರಿಯನ್ನು ಪೂರಕವಾಗಿ ಮತ್ತೊಂದು ಕಡೆಯಲ್ಲಿ ನಿವೇದಿಸಿರುವರು.

8. ಸಾಮಾನ್ಯವಾಗಿ, ಸ್ಥಿರ ಸ್ವತ್ತಿನ ಕ್ರಯ ಪತ್ರದ ನಿರ್ದಿಷ್ಟ ಪಾಲನೆಯ ದಾವೆಯನ್ನು ಹೂಡಿದಾಗ ಉದ್ಭವವಾಗಬಹುದಾದ ಪ್ರಶ್ನೆಗಳು, 1) ಅಧಿನಿಯಮದ 16ನೇ ಪ್ರಕರಣದ ಅಗತ್ಯತೆಗಳನ್ನು ವಾದಿಯು ತೃಪ್ತಿಕರವಾಗಿ ನೆರವೇರಿಸಿದ್ದಾನೆಯೇ, 2) 10ನೇ ಪ್ರಕರಣದ ನಿಬಂಧನೆಗಳಲ್ಲಿ ಜಾರಿಮಾಡಿರಬಹುದಾದ ಕರಾರಿನ ಆ

ಯಾವುದೇ ನಿರ್ದಿಷ್ಟ ಪಾಲನೆಯ ಮೊಕದ್ದಮೆಯೇ, 3) ಅಧಿನಿಯಮದ 20 ನೇ ಪ್ರಕರಣದ ನಿಬಂಧನೆಗಳ ಅನುಸಾರ ನ್ಯಾಯಾಲಯವು, ನಿರ್ದಿಷ್ಟ ಪಾಲನೆಗೆ ಡಿಕ್ರಿಗೆ ವಿವೇಚನೆಯನ್ನು ಚಲಾಯಿಸಿದೆಯೇ, 4) ಕಾಲಪರಿಮಿತಿ ಅಧಿನಿಯಮದ 54 ನೇ ಪ್ರಕರಣವನ್ನು ಉಲ್ಲೇಖಿಸುವುದರೊಂದಿಗೆ ಪ್ರತಿವಾದಿ ಈ ದಾವೆಗೆ ಸಂಬಂಧಿಸಿದಂತೆ ಕಾಲಪರಿಮಿತಿಯನ್ನು ಪ್ರತಿಷೇಧಿಸಿರುವುದನ್ನು ಎತ್ತಿರುವರೇ, ದಾವೆಯಲ್ಲಿ ಕಾಲಪರಿಮಿತಿಯನ್ನು ಪ್ರತಿಷೇಧಿಸಲಾಗಿದೆಯೇ ಮತ್ತು, 5) ವಾದಿಯು ನಿರ್ಲಕ್ಷತೆಯ ತಪ್ಪಿತಸ್ಥನಾಗಿರುವನೋ ಅಥವಾ ಡಿಕ್ರಿಯನ್ನು ನಿರ್ದಿಷ್ಟವಾಗಿ ಪಾಲನೆ ಮಾಡುವುದಕ್ಕಾಗಿ ಆ ಯಾವುದೇ ಕರ್ತವ್ಯ ಚ್ಯುತಿಯ ಅನರ್ಹತೆಗಳು ಇವೆಯೇ.

9. ಅಧಿನಿಯಮದ 20 ನೇ ಪ್ರಕರಣವು ಕಾನೂನಿನಲ್ಲಿ ಉದ್ಭವಿಸಿದ ಗಣನೀಯ ಪ್ರಶ್ನೆಗಳಿಗೆ ಉತ್ತರಿಸುತ್ತವೆ, 20 ನೇ ಪ್ರಕರಣದ ಉಧೃತ ಭಾಗವು ಈ ಕೆಳಗಿನಂತಿದೆ:

> ***20. ನಿರ್ದಿಷ್ಟ ಪಾಲನೆಗೆ ಡಿಕ್ರಿ ಕೊಡುವುದಕ್ಕಾಗಿ ವಿವೇಚನೆ.–***
> *(1) ನಿರ್ದಿಷ್ಟ ಪಾಲನೆಗೆ ಡಿಕ್ರಿ ಕೊಡುವ ಅಧಿಕಾರ ವ್ಯಾಪ್ತಿಯು ವಿವೇಚನಾಧೀನವಾಗಿರುವುದು ಮತ್ತು ಹಾಗೆ ಮಾಡುವುದು ವಿಧಿಬದ್ಧವಾಗಿದೆಯೆಂಬ ಮಾತ್ರದಿಂದಲೇ ಅಂಥ ಪರಿಹಾರವನ್ನು ಕೊಡಲು ನ್ಯಾಯಾಲಯವು ಬದ್ಧವಾಗಿರುವುದಿಲ್ಲ, ಆದರೆ ನ್ಯಾಯಾಲಯದ ವಿವೇಚನೆಯು ನಿರಂಕುಶವಾಗಿರದೆ ನ್ಯಾಯಸಮ್ಮತವೂ ಸಕಾರಣವೂ ಆಗಿದ್ದು ನ್ಯಾಯಿಕ ತತ್ವಗಳಿಂದ ಮಾರ್ಗದರ್ಶಿತವಾಗಿರತಕ್ಕದ್ದು ಮತ್ತು ಅಪೀಲು ನ್ಯಾಯಾಲಯವು ಸರಿಪಡಿಸಲು ಸಾಧ್ಯವಾಗಿರತಕ್ಕದ್ದು.*
>
> *(2) ನಿರ್ದಿಷ್ಟಪಾಲನೆಗೆ ಡಿಕ್ರಿ ಕೊಡದಿರಲು ನ್ಯಾಯಾಲಯವು, ವಿವೇಚನೆಯನ್ನು ಯುಕ್ತವಾಗಿ ಚಲಾಯಿಸಬಹುದಾದಂಥ ಸಂದರ್ಭಗಳು ಈ ಕೆಳಗಿನಂತಿವೆ.–*

*(ಎ) ಕರಾರು ಶೂನ್ಯಕರಣೀಯವಾಗಿರದಿದ್ದರೂ ಅದರ ನಿಬಂಧನೆಗಳು ಅಥವಾ ಅದನ್ನು ಮಾಡಿಕೊಳ್ಳುವ ಕಾಲದಲ್ಲಿ ಪಕ್ಷಕಾರರ ವರ್ತನೆ ಅಥವಾ ಅದನ್ನು ಮಾಡಿಕೊಂಡ ಇತರ ವಿದ್ಯಮಾನಗಳು, ವಾದಿಗೆ ಪ್ರತಿವಾದಿಯ ಮೇಲೆ ಅನುಚಿತ ಲಾಭವನ್ನು ಕೊಡುವಂತಿರುವುದು; ಅಥವಾ*

*(ಬಿ) ಕರಾರಿನ ಪಾಲನೆಯಿಂದ ಪ್ರತಿವಾದಿಗೆ ಅವನು ಮುಂಗಾಣದಿದ್ದಂಥ ಕೆಲವು ತೊಂದರೆಗಳು ಉಂಟಾಗುತ್ತಿರುವುದು ಮತ್ತು ಅದನ್ನು ಪಾಲಿಸದಿದ್ದರೆ ವಾದಿಗೆ ಅಂಥ ತೊಂದರೆಯುಂಟಾಗದಿರುವುದು; ಅಥವಾ*

*(ಸಿ) ಪ್ರತಿವಾದಿಯು ಕರಾರು ಮಾಡಿಕೊಂಡಿರುವ ವಿದ್ಯಮಾನಗಳು ಕರಾರನ್ನು ಶೂನ್ಯಗೊಳಿಸಿದವುಗಳಾಗಿದ್ದರೂ, ಅದರ ನಿರ್ದಿಷ್ಟ ಪಾಲನೆಯ ಜಾರಿಗೊಳಿಸುವಿಕೆಯು ನೀತಿ ಸಮ್ಮತವಲ್ಲದ್ದಾಗುವುದು.*

*ವಿವರಣೆ 1:–ಪ್ರತಿಫಲವು ಸಾಕಷ್ಟು ಇಲ್ಲದಿರುವುದು ಮಾತ್ರವೇ, ಅಥವಾ ಕರಾರು ಪ್ರತಿವಾದಿಗೆ ದುರ್ಭರವಾಗಿದೆಯೆಂಬ ಸಂಗತಿಯು ಮಾತ್ರವೇ ಅಥವಾ ಸ್ವಭಾವತಃ ಮುಂದಾಲೋಚನೆ ಇಲ್ಲದ್ದಾಗಿರುವುದು (ಎ) ಖಂಡದ ಅರ್ಥದಲ್ಲಿ ಅನುಚಿತ ಲಾಭಪ್ರದವಾಗುವುದೆಂದು ಅಥವಾ (ಬಿ) ಖಂಡದ ಅರ್ಥದಲ್ಲಿ ತೊಂದರೆ ಉಂಟು ಮಾಡುವುದೆಂದು ಭಾವಿಸತಕ್ಕದ್ದಲ್ಲ.*

*ವಿವರಣೆ 2:– (ಬಿ) ಖಂಡದ ಅರ್ಥದಲ್ಲಿ ಕರಾರಿನ ಪಾಲನೆಯು ಪ್ರತಿವಾದಿಗೆ ತೊಂದರೆಯುಂಟು ಮಾಡುವುದೇ ಎಂಬ ಪ್ರಶ್ನೆಯನ್ನು*

*ಕರಾರಿನ ತರುವಾಯ ವಾದಿಯು ಯಾವುದೇ ಕಾರ್ಯದಿಂದ ತೊಂದರೆಯುಂಟಾದ ಸಂದರ್ಭಗಳನ್ನುಳಿದು, ಕರಾರಿನ ಕಾಲದಲ್ಲಿ ಇರುವ ವಿದ್ಯಮಾನಗಳನ್ನು ಗಮನಿಸಿ ನಿರ್ಧರಿಸತಕ್ಕದ್ದು.*

*(3) ವಾದಿಯು ಮುಖ್ಯ ಕಾರ್ಯಗಳನ್ನು ಮಾಡಿರುವ ಅಥವಾ ನಿರ್ದಿಷ್ಟ ಪಾಲನೆಗೆ ಸಾಧ್ಯವಿರುವ ಕರಾರಿನ ಫಲವಾಗಿ ನಷ್ಟಗಳನ್ನು ಅನುಭವಿಸಿದ ಯಾವುದೇ ಸಂದರ್ಭದಲ್ಲಿ ನಿರ್ದಿಷ್ಟ ಪಾಲನೆಯ ಡಿಕ್ರಿಯನ್ನು ಕೊಡಲು ನ್ಯಾಯಾಲಯವು ವಿವೇಚನೆಯನ್ನು ಸಮುಚಿತವಾಗಿ ಉಪಯೋಗಿಸಬಹುದು.*

*(4) ಪಕ್ಷಕಾರರಲ್ಲಿ ಮತ್ತೊಬ್ಬನ ಕೋರಿಕೆಯ ಮೇರೆಗೆ ಕರಾರನ್ನು ಜಾರಿಗೊಳಿಸಲು ಆಗುವುದಿಲ್ಲವೆಂಬ ಕಾರಣ ಮಾತ್ರದಿಂದಲೇ ನ್ಯಾಯಾಲಯವು ಯಾವುದೇ ಪಕ್ಷಕಾರನಿಗೆ ಕರಾರಿನ ನಿರ್ದಿಷ್ಟ ಪಾಲನೆಯನ್ನು ನಿರಾಕರಿಸತಕ್ಕದ್ದಲ್ಲ.*

10. 20ನೇ ಪ್ರಕರಣ ನಿರ್ದಿಷ್ಟ ಪಾಲನೆ ಡಿಕ್ರಿಗೆ ಅಧಿಕಾರ ವ್ಯಾಪ್ತಿಯು ವಿವೇಚನಾತ್ಮಕವಾದುದೆಂದು ಉಪಬಂಧಿಸಿದೆ ಮತ್ತು ನ್ಯಾಯಾಲಯವು ಕಾನೂನು ಸಮ್ಮತವಾಗಿ ಅಂಥ ಪರಿಹಾರವನ್ನು ಮಂಜೂರು ಮಾಡಬಹುದೆಂಬ ಕಾರಣ ಮಾತ್ರದಿಂದಲೇ ಹಾಗೆ ಮಾಡಲು ಬದ್ಧವಾಗಿರುವುದಿಲ್ಲ ಎಂದು ಉಪಬಂಧಿಸಿದೆ. ಅಧಿನಿಯಮದ 20 ನೇ ಪ್ರಕರಣದ (2)ನೇ ಉಪಪ್ರಕರಣವು ನ್ಯಾಯಾಲಯವು ಆ ಯಾವುದೇ ಮೂರು ಸನ್ನಿವೇಶಗಳಲ್ಲಿ ನಿರ್ದಿಷ್ಟ ಪಾಲನೆಗಾಗಿ ಡಿಕ್ರಿಯನ್ನು ಕೊಡುವ ತನ್ನ ವಿವೇಚನಾಧಿಕಾರವನ್ನು ಚಲಾಯಿಸಲು ಸಾಧ್ಯವಾಗುವುದಿಲ್ಲ ಎಂದು ಉಪಬಂಧಿಸಿದೆ. ನ್ಯಾಯಾಲಯದ ವಿವೇಚನಾಧಿಕಾರವು ನಿರಂಕುಶವಾಗಿರದೆ ನ್ಯಾಯ ಸಮ್ಮತವೂ ಸಕಾರಣವೂ ಆಗಿದ್ದು ನ್ಯಾಯಿಕ ತತ್ವಗಳಿಂದ ಮಾರ್ಗದರ್ಶಿತ್ವವಾಗಿರತಕ್ಕದ್ದು ಮತ್ತು ಅಪೀಲು ನ್ಯಾಯಾಲಯವು ಸರಿಪಡಿಸಲು ಸಾಧ್ಯವಾಗಿರತಕ್ಕದ್ದು.

11. ಸರ್ವೋಚ್ಚ ನ್ಯಾಯಾಲಯದ ***ಪಾರಾಕುನ್ನಿನ್ ವೀಟಿಲ್ಲ ಜೋಸೆಫ್‌ರ ಮಗ ಮಾಥ್ಯೂ –ವಿರುದ್ಧ– ನೆಡುಂಬಾರಾ ಕುರುವಿಲ್ಲ ಅವರ ಮಗ ಮತ್ತು ಇತರರು*** [1], ಮೊಕದ್ದಮೆಯಲ್ಲಿ ಅಧಿನಿಯಮದ 20 ನೇ ಪ್ರಕರಣದ ವ್ಯಾಪ್ತಿ ಮತ್ತು ಪರಧಿಯನ್ನು ವಿಚಾರಣೆಮಾಡಿ ನೀಡಿದ ನಿರ್ಣಯ ಈ ಮುಂದಿನಂತಿದೆ.

> ‘‘14. ನಿರ್ದಿಷ್ಟ ಪಾಲನೆಗೆ ಡಿಕ್ರಿ ನೀಡುವುದಕ್ಕೆ ನ್ಯಾಯಾಲಯಗಳ ನ್ಯಾಯಿಕ ವಿವೇಚನಾಧಿಕಾರವನ್ನು ನಿರ್ದಿಷ್ಟ ಪರಿಹಾರ ಅಧಿನಿಯಮ, 1963 ರ 20ನೇ ಪ್ರಕರಣವು ಪ್ರತಿರಕ್ಷಿಸುತ್ತದೆ. ನ್ಯಾಯಾಲಯ ಮೊಕದ್ದಮೆಯ ಎಲ್ಲ ಸಂಗತಿ ಮತ್ತು ಸನ್ನಿವೇಶಗಳನ್ನು ಅತಿ ಸೂಕ್ಷ್ಮವಾಗಿ ಪರಿಗಣಿಸತಕ್ಕದ್ದು. ಹಾಗೆ ಮಾಡುವುದು ಕಾನೂನುಬದ್ಧವಾಗಿದೆಯೆಂಬ ಮಾತ್ರದಿಂದಲೇ ಅಂಥ ಪರಿಹಾರವನ್ನು ಕೊಡಲು ನ್ಯಾಯಾಲಯವು ಬದ್ಧವಾಗಿರುವುದಿಲ್ಲ. ನ್ಯಾಯಿಕ ತೀರ್ಮಾನದೊಳಗೆ ಕಾನೂನು ವ್ಯಾಜ್ಯದ ವ್ಯವಹರಣೆಯ ಉದ್ದೇಶವಿರತಕ್ಕದ್ದು. ನ್ಯಾಯಾಲಯವು ವಾದಿಗೆ ಅನುಚಿತ ಲಾಭ ಮಾಡಿಕೊಡುವುದಕ್ಕೆ ದಬ್ಬಾಳಿಕೆಯ ಅಸ್ತ್ರದಂತೆ ಬಳಸದಿರುವುದನ್ನು ಅದು ಬಹಳ ಎಚ್ಚರಿಕೆಯಿಂದ ನೋಡತಕ್ಕದ್ದು.’’

12. ಸರ್ವೋಚ್ಚ ನ್ಯಾಯಾಲಯವು ***ಗೋಬಿಂದ ರಾಮ್ –ವಿರುದ್ಧ– ಗೈನ್ ಚಾಂದ್***[2]**,** ಮೊಕದ್ದಮೆಯಲ್ಲಿ ನೀಡಿದ ಆದೇಶವು ಮುಂದಿನಂತಿದೆ:

> ‘‘7. ಕರಾರಿನ ನಿರ್ದಿಷ್ಟ ಪಾಲನೆಗೆ ಡಿಕ್ರಿ ನೀಡುವುದು ಅದು ಸ್ವಯಂಚಾಲಿತವಾಗಿರುವುದಿಲ್ಲವೆಂಬುದು ಕಾನೂನಿನಲ್ಲಿ ಇತ್ಯರ್ಥವಾದ ಸ್ಥಿತಿಯಾಗಿದೆ ಮತ್ತು ನ್ಯಾಯಾಲಯಕ್ಕೆ ವಿವಾಚನಾಧೀನವಾದುದಾಗಿದೆ.

1. 1987 (ಎಸ್‌ಯುಪಿಪಿ) ಎಸ್‌ಸಿಸಿ 340
2. (2000) 7 ಎಸ್‌ಸಿಸಿ 548

ನ್ಯಾಯಾಲಯವು ನಿಷ್ಪಕ್ಷಪಾತ ಮತ್ತು ನ್ಯಾಯಸಮ್ಮತವಾಗಿರುವುದನ್ನು ಪರಿಗಣಿಸ ಬೇಕಾಗುತ್ತದೆ. ನ್ಯಾಯಾಲಯ ನ್ಯಾಯದ ತತ್ವಗಳನ್ನು ನ್ಯಾಯಸಮ್ಮತದ ಮತ್ತು ಚಿತ್ತಶುದ್ಧಿಯಿಂದ ಮಾರ್ಗದರ್ಶಿಸಬೇಕಾಗುತ್ತವೆ. ಪಿ.ವಿ. ಜೋಸೆಫ್‌ರ ಮಗ ಮ್ಯಾಥ್ಯೂ (1987 ಎಸ್‌ಸಿಸಿ 340) ಮೊಕದ್ದಮೆಯಲ್ಲಿ ನ್ಯಾಯಾಲಯವು ಮೊಕದ್ದಮೆಯ ಎಲ್ಲ ಸಂಗತಿಗಳು ಮತ್ತು ಸನ್ನಿವೇಶಗಳನ್ನು ಮತ್ತು ವ್ಯಾಜ್ಯದ ಹಿಂದಿನ ಉದ್ದೇಶವನ್ನು ಸಹ ಅತಿ ಜಾಗರೂಕತೆಯಿಂದ ಪರಿಗಣಿಸತಕ್ಕದ್ದು ಎಂದು ನಿರೂಪಿಸಿದೆ."

13. ಸರ್ವೋಚ್ಚ ನ್ಯಾಯಾಲಯವು ***ಬಾಲಕೃಷ್ಣ ಮತ್ತು ಮತ್ತೊಬ್ಬರು –ವಿರುದ್ಧ– ಭಗವಾನ್ ದಾಸ್ (ಮೃತ) ಅವರ ಕಾನೂನು ಸಮ್ಮತ ಪ್ರತಿನಿಧಿಗಳು ಮತ್ತು ಇತರರು***[4], ಮೊಕದ್ದಮೆಯಲ್ಲಿ ನೀಡಿದ ಆದೇಶವು ಈ ಕೆಳಗಿನಂತಿದೆ:

"14. ನಿರ್ದಿಷ್ಟ ಪಾಲನೆಯ ಪರಿಹಾರವು ನ್ಯಾಯಾಲಯದ ವಿವೇಚನಾನುಸಾರವಿರುತ್ತದೆಂಬುದು ಅಧಿನಿಯಮದ 20ನೇ ಪ್ರಕರಣದ ಬಲದಿಂದ ಈ ನ್ಯಾಯಾಲಯವು ವಿವಿಧ ನಿರ್ಣಯಗಳ ಮೂಲಕ ಇತ್ಯರ್ಥಪಡಿಸಿದೆ, ಹಾಗೆ ಮಾಡುವುದು ಕಾನೂನು ಬದ್ಧವಾಗಿದೆಯೆಂಬ ಮಾತ್ರದಿಂದಲೇ ಮತ್ತು ಅಂಥ ಪರಿಹಾರವನ್ನು ಮಂಜೂರು ಮಾಡಲು ನ್ಯಾಯಾಲಯ ಬದ್ಧವಾಗಿರುವುದಿಲ್ಲ. ನ್ಯಾಯಾಲಯ ನಿರ್ದಿಷ್ಟ ಪಾಲನಾ ಆದೇಶ ನೀಡಲು ವಿವೇಚನೆಯನ್ನು ಬಳಸಲು ಕರಾರಿನ ನಿರ್ದಿಷ್ಟ ಪಾಲನೆಯ ನ್ಯಾಯಸಮ್ಮತ ಡಿಕ್ರಿಯನ್ನು ನೀಡುವುದಕ್ಕೆ ಇರುವಂತಹ ಸಂಗತಿಗಳನ್ನು ಅದು ಸ್ವತಃ ತಾನೇ ಮನದಟ್ಟು ಮಾಡಿಕೊಳ್ಳುವುದನ್ನು ಅಗತ್ಯ ಪಡಿಸುತ್ತದೆ. ವಿವೇಚನೆಯನ್ನು ಬಳಸುವಾಗ ನ್ಯಾಯಾಲಯ ಮೊಕದ್ದಮೆಯ ಪಕ್ಷಕಾರರ ನಡಾವಳಿ ಮತ್ತು ಕರಾರಿನ ಅಡಿಯಲ್ಲಿ

3. (2008) 12 ಎಸ್‌ಸಿಸಿ 145

> ಬರುವ ಅವರ ಸಂಬಂಧಪಟ್ಟ ಹಿತಾಸಕ್ತಿಗಳು ಸನ್ನಿವೇಶವನ್ನು ಪರಿಗಣನೆಗೆ ತೆಗೆದು ಕೊಳ್ಳಬೇಕಾಗುತ್ತವೆ. ಕರಾರಿನಲ್ಲಿ ನಿರ್ದಿಷ್ಟ ಪಾಲನೆ ಇರದಿರುವಾಗ, ಮೋಸ ಅಥವಾ ತಪ್ಪು ನಿರೂಪಣೆಗಳಿಂದ ನಿರರ್ಥಕವಾಗದಿರುವಾಗ ವಾದಿಗೆ ಅನುಚಿತ ಲಾಭದಾಗಿದ್ದಲ್ಲಿ ಡಿಕ್ರಿಯನ್ನು ನೀಡಿದಲ್ಲಿ ಮತ್ತು ಪ್ರತಿವಾದಿ ಕರಾರನ್ನು ನೆರವೇರಿಸಲು ಸಂಭಾವ್ಯ ಕೆಲವು ಕಷ್ಟಗಳಲ್ಲಿ ಅವನು ಒಳಗೊಳ್ಳಬೇಕಾಗುತ್ತದೆ. ಇತರ ಮಾತುಗಳಲ್ಲಿ ಹೇಳುವುದಾದರೆ, ನ್ಯಾಯಾಲಯಗಳು ನ್ಯಾಯಸಮ್ಮತವಾಗಿರದ ಮತ್ತು ನಿಷ್ಪಕ್ಷಪಾತ ವಾಗಿರದ ಕರಾರುಗಳು ಇದ್ದರೆ ಹಾಗೆಯೇ ಅಂತಹ ಕರಾರುಗಳು ಶೂನ್ಯವಾಗಿರದಿದ್ದಲ್ಲಿ ಅವುಗಳ ಸಂಬಂಧ ನಿರ್ದಿಷ್ಟ ಪಾಲನೆಯ ಡಿಕ್ರಿ ನೀಡಲು ತನ್ನ ವಿವೇಚನೆಯನ್ನು ಬಳಸಬಾರದು."

14. ಪ್ರಸ್ತುತ ಮೊಕದ್ದಮೆಯಲ್ಲಿ, ಕೆಳ ನ್ಯಾಯಾಲಯಗಳೆರಡು ಅಧಿನಿಯಮದ 20 ನೇ ಪ್ರಕರಣವನ್ನು ಉಲ್ಲೇಖಿಸಿರುವುದರ ಮೂಲಕ ನಿರ್ದಿಷ್ಟ ಪಾಲನೆ ಡಿಕ್ರಿ ನೀಡಲು ವಿವೇಚನೆ ಬಳಸುವುದಕ್ಕೆ ಅಥವಾ ಬಳಸದಿರುವುದಕ್ಕೆ ಅದು ಯುಕ್ತ ಮೊಕದ್ದಮೆಯಾಗಿದೆಯೆ ಎಂಬುದನ್ನು ಸರಿಯಾಗಿ ಪರಿಶೀಲನೆ ಮಾಡಿರುವುದಿಲ್ಲ. ಅಧಿನಿಯಮದ 20ನೇ ಪ್ರಕರಣವನ್ನು ಉಲ್ಲೇಖಿಸಿ ಮುಖ್ಯ ವಿವಾದಾಂಶದಂತೆ ಅದನ್ನು ಎತ್ತಿರುವುದಿಲ್ಲ, ಪರಿಗಣಿಸಿರುವುದಿಲ್ಲ. ಹಾಗಿದ್ದೂ ಮೊಕದ್ದಮೆಯನ್ನು ನಿರ್ಣಯಿಸಿದೆ. ಆದುದರಿಂದ ಈ ಅಪೀಲು ಪುರಸ್ಕರಿಸುವುದಕ್ಕೆ ಯೋಗ್ಯವಾಗಿದೆ. ಪ್ರಮುಖ ಕಾನೂನು ಅಂಶಗಳನ್ನು ಸರಿಯಾಗಿ ಪರಿಗಣಿಸದಿರುವುದರಿಂದ ಮೇಲೆ ಹೇಳಲಾದ ಕಾನೂನಿನ ಗಣನೀಯ ಪ್ರಶ್ನೆಗೆ ಸಕಾರಾತ್ಮಕವಾಗಿ ಉತ್ತರಿಸಬೇಕಿದೆ. ಪರಿಣಾಮವಾಗಿ, ಅಪೀಲನ್ನು ಪುರಸ್ಕರಿಸಲಾಗಿದೆ ಮತ್ತು ಪ್ರಶ್ನಿತ ತೀರ್ಪನ್ನು ಮತ್ತು ಡಿಕ್ರಿಯನ್ನು ವಜಾ ಮಾಡಲಾಗಿದೆ. ಈ ಮೊಕದ್ದಮೆಯನ್ನು ವಿಚಾರಣಾ ನ್ಯಾಯಲಯಕ್ಕಾಗಿ ಹೊಸದಾಗಿ ಮುಖ್ಯ ವಾದವನ್ನು ಸುನಾವಣೆ ಮಾಡಲು ಮತ್ತು ಹೊಸದಾಗಿ ನಿರ್ಣಯಮಾಡುವ ಸಲುವಾಗಿ ಮೊಕದ್ದಮೆಯನ್ನು ವಿಚಾರಣಾ ನ್ಯಾಯಾಲಯಕ್ಕೆ ವಾಪಸ್ಸು ಕಳುಹಿಸುವುದು.

ತ್ವರಿತವಾಗಿ ಸುನಾವಣೆ ಮಾಡುವ ಸಲುವಾಗಿ ಎರಡು ಪಕ್ಷಕಾರರು ದಿನಾಂಕ 02.04.2016 ರಂದು ವಿಚಾರಣಾ ನ್ಯಾಯಾಲಯದ ಮುಂದೆ ಹಾಜರಾಗಲು ನಿರ್ದೇಶಿಸಿದೆ ಮತ್ತು ವಿಚಾರಣಾ ನ್ಯಾಯಾಲಯದಲ್ಲಿ ಮುಂದಿನ ಆದೇಶಗಳನ್ನು ಪಡೆದುಕೊಳ್ಳುವುದು. ವಿಚಾರಣಾ ನ್ಯಾಯಾಲಯವು, ದಾವೆಯ ವಾದಗಳನ್ನು ಸುನಾವಣೆಯ ಹಂತದಿಂದ ಪ್ರಾರಂಭಿಸಿ ಈ ದಾವೆಯನ್ನು ಶೀಘ್ರವಾಗಿ ಮತ್ತು ದಿನಾಂಕ 30.07.2016ಕ್ಕಿಂತ ಮುಂಚಿತವಾಗಿ ನಿರ್ಣಯವನ್ನು ಮಾಡತಕ್ಕದ್ದು.

ಅಪೀಲುದಾರರು ಕಾನೂನಿಗೆ ಅನುಸಾರವಾಗಿ ನ್ಯಾಯಾಲಯದ ಶುಲ್ಕವನ್ನು ಹಿಂಪಡೆಯಲು ಹಕ್ಕುಳ್ಳವರಾಗಿರುವರು.

---